# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.69/2021

C.W.3
P.W. 3

ದಿನಾಂಕಃ 12-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಹೆಸರು ಃ ಸೈಮನ್ ವಿಕ್ಟರ್
ತಂದೆಯ ಹೆಸರು ಃ ಜಾನ್ ಮೋಸಸ್
ವಯಸ್ಸು ಃ 49 ವರ್ಷ
ಉದ್ಯೋಗ ಃ ಮುಖ್ಯಪೇದೆ -50
ವಾಸ ಃ ಸೈಬರ್ ಪೊಲೀಸ್ ಠಾಣೆ , ತುಮಕೂರು

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು 2017 ಜುಲೈ ರಿಂದ ಜೂನ್ 2021 ರವರಿಗೆ ಹೊಸ ಬಡಾವಣೆ ಪೊಲೀಸ್ ಠಾಣೆ, ತುಮಕೂರಿನಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿ 06-12-20 ರಂದು ಹೊಸಬಡಾವಣೆ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ.39-20 ಕಲಂ.399,402 ಐಪಿ ಸಿ ಮತ್ತು ಅಪರಾಧ ಸಂಖ್ಯೆ.91-20 ಕಲಂ. 302 ಐ ಪಿ ಸಿ ದಾಖಲಾದ ಪ್ರಕರಣಗಳಲ್ಲಿ ಆರೋಪಿತರ ಪತ್ತೆಗಾಗಿ ಪೊಲೀಸ್ ಇನ್ಸ್‌ಪೆಕ್ಟರ್

ರವರು ತಂಡವನ್ನು ರಚಿಸಿದರು. ಸದರಿ ತಂಡದಲ್ಲಿ ತಿಲಕ್ ಪಾರ್ಕ್ ಪೂಲೀಸ್ ಠಾಣೆಯ ಪಿ ಎಸ್ ಐ , ಪರಮೇಶ್ವರ ಎ ಎಸ್ ಐ , ಮುನಾವರ್ ಪಾಷ ಹೆಚ್ ಸಿ ಮತ್ತು ನಾನು ಸದರಿ ತಂಡದಲ್ಲಿ ಇದ್ದೇವು.

3) ಪ್ರಕರಣದ ಆರೋಪಿಯಾದ ವಿಕಾಸ್ ಅಲಿಯಾಸ್ ವಿಕ್ಕಿ ಇತನು ಠಾಣೆಯ ಎಂ ಓ ಬಿ ಅಸಾಮಿಯಾಗಿದ್ದು ಅದೇ ದಿನ ಸಂಜೆ 5 ಗಂಟೆ ಆರೋಪಿ ವಿಕಾಸ್ ಅಲಿಯಾಸ್ ವಿಕ್ಕಿ ಇತನು ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯ ಸರಹದ್ದು ಅಜ್ಜಪ್ಪನ ಹಳ್ಳಿ ಗ್ರಾಮದ ತ್ರೀ ಅಂಜನೇ ಯ ಸ್ವಾಮಿ ದೇವಸ್ಥಾನದ ಹತ್ತಿರ , ಸಮುದಾಯ ಭವನ ನಿರ್ಮಾಣದ ಹತ್ತಿರ ಇರುವ ಬ ಗ್ಗೆ ಮಾಹಿತಿ ಬಂದಿತು.

4) ತಕ್ಷಣ ತಿಲಕ್ ಪಾರ್ಕ್ ಪಿ ಎಸ್ ಐ , ಪರಮೇಶ್ವರಯ್ಯ , ಮುನಾವರ್ ಪಾಷ ಮತ್ತು ನಾನು ಇಲಾಖೆ ಜೀಪ್ ಸಂಖ್ಯೆ ಕೆ ಎ-64-ಜಿ -333 ವಾಹನದಲ್ಲಿ ಮಾಹಿತಿ ಬಂದ ಸ್ಥಳವಾದ ಸಮುದಾಯ ಭವನದ ಹತ್ತಿರ ಹೋದೆವು. ನಂತರ ಸಮುದಾಯದ ಹತ್ತಿರ ಹೋಗಿ ನೋಡಲಾಗಿ ಸದರಿ ಸಮುದಾಯ ಭವನಕ್ಕೆ ಕಿಟಕಿ ಬಾಗಿಲು ಇರಲಿಲ್ಲ, ಒಂದು ಕೊಣೆಯಲ್ಲಿ ಹೋಗಿ ನೋಡಲಾಗಿ ಒಬ್ಬ ಅಸಾಮಿ ಅಂದರೆ ಆರೋಪಿ ವಿಕಾಸ್ ಅಲಿಯಾಸ್ ವಿಕ್ಕಿ ನಮ್ಮ ಸಮವಸ್ತ್ರವನ್ನು ನೋಡಿ ಓಡಿ ಹೋದನು.

5) ಆಗ ನಾವು ಆತನನ್ನು ಹಿಡಿಯಲು ಬೆನ್ನಟ್ಟಿಹೋದಾಗ ನಮ್ಮ ಜೊತೆಗೆ ಇದ್ದ ಪರಮೇಶ್ವರ ಇವರ ಮೇಲೆ ಆರೋಪಿ ಬಳಿ ಇದ್ದ ಡ್ರ್ಯಾಗರ್ ನ ಮೂಲಕ ಆತನ ಎಡಗೈ ರೆಟ್ಟೆಗೆ ಹೊಡೆದನು, ಆಗ ರಕ್ತಗಾಯವಾಯಿತು. ಆಗ ನಾನು ಆರೋಪಿಯನ್ನುಹಿಡಿಯಲು ಹೋದಾಗ ಆತನ ಕೈಯಲ್ಲಿ ಇದ್ದ ಡ್ರ್ಯಾಗರ್ ನನ್ನ ಕಡೆ ಗೆ ತಿವಿಯಲು ಬಂದನು. ಆಗ ನನ್ನ ಜೊತೆಯಲ್ಲಿ ಇದ್ದ ಪಿ ಎಸ್ ಐ ನವೀನ್ ಕುಮಾರ್ ರವರು ಆರೋಪಿತನಿಗೆ ಶರಣು ಆಗುವಂತೆ ತಿಳಿಸಿ ಗಾಳಿಯಲ್ಲಿ ಗುಂಡು ಹಾರಿಸಿರುತ್ತಾರೆ. ಅದಕ್ಕೆ ಆರೋಪಿತನು ಲೆಕ್ಕಿಸದೇ ನನಗೆ ಡ್ರ್ಯಾಗರ್ ನಿಂದ ತಿವಿಯಲು ಬಂದಾಗ ಪಿ ಎಸ್ ಐ ನವೀನ್ ಕುಮಾರ್ ರವರು ತಮ್ಮ ಬಳಿ ಇದ್ದ ಸರ್ವೀಸ್ ರಿವಲವರ್ ನಿಂದ ಆರೋಪಿಯ ಎಡಗಾಲಿನ ಮಡಿಯ ಬಳಿ ಗುಂಡು ಹಾರಿಸಿರುತ್ತಾರೆ. ನಂತರ ಆರೋಪಿತನನ್ನು ನಮ್ಮ ವಶಕ್ಕೆ ಪಡೆದು ಆತನನ್ನು ಚಿಕಿತ್ಸೆಗಾಗಿ ನಮ್ಮ ವಾಹನದಲ್ಲಿ ಕುರಿಸಿಕೊಂಡು ಯಲ್ಲಾಪುರದ ಬಳಿ ಬರುತ್ತೇವೆ , ನಂತರ ಪಿ ಎಸ್ ಐ ನವೀನ್ ಕುಮಾರ್ ರವರು ಘಟನೆಯಲ್ಲಿ ಆರೋಪಿತನಿಗೆ ಗುಂಡು ಹಾರಿಸಿದ್ದು , ಆತನಿಗೆ ಗಾಯವಾಗಿ ಆಸ್ಪತ್ರೆಗೆ ಸಾಗಿಸುತ್ತಿರುವುದಾಗಿ ಇನ್ಸ್ ಪೆಕ್ಟರ್ ಮುನಿರಾಜುವಿಗೆ ಪೋನ್ ಮೂಲಕ ಮಾಹಿತಿ ತಿಳಿಸುತ್ತಾರೆ. ಮಾಹಿತಿ ತಿಳಿದ ಮುನಿರಾಜು ಇನ್ಸ್ ಪೆಕ್ಟರ್ ರವರು ತಮ್ಮ ಜೀಪಿನಲ್ಲಿ ಯಲ್ಲಾಪುರ ಗೇಟ್ ನ ಹತ್ತಿರ ಬಂದಿದ್ದರು. ಆಗ ಪಿ ಎಸ್ ಐ ವಾಹನದಲ್ಲಿ ಸ್ಥಳವಕಾಶ ಇಲ್ಲದ ಕಾರಣ ನಾನು ಮತ್ತು ಪರಮೇಶ್ವರ ಇಬ್ಬರು ಇನ್ಸ್ ಪೆಕ್ಟರ್ ಮುನಿರಾಜುರವರ ವಾಹನದಲ್ಲಿ ಬಂದು ನಂತರ ಗಾಯಳು ವಿಕ್ಕಿ ಅಲಿಯಾಸ್ ವಿಕಾಸ್ , ಮುನಾವರ್ ಪಾಪ ಪಿ ಎಸ್ ಐ

ವಾಹನದಲ್ಲಿ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ. ನಂತರ ಇನ್ಸ್ ಪೆಕ್ಟರ್ ಮುನಿರಾಜುರವರು ನನಗೆ ಮೌಖಿಕವಾಗಿ ಆರೋಪಿಯ ಬೆಂಗಾವಲು ಆಗಿ ಇರು ಎಂದು ಹೇಳುತ್ತಾರೆ.

6) ನಂತರ ಪಿ ಎಸ್ ಐ ನವೀನ್ ಕುಮಾರ್ ರವರು ತುಮಕೂರಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದನೀಡಿದ್ದು, ಆಸ್ಪತ್ರೆಯಲ್ಲಿ ಗಾಯಳುವಿನ ರಕ್ತದ ಕಲೆಯಾಗಿರುವ ಬರ್ಮೋಡ ನಿಕ್ಕರ್ ನ್ನು ನನ್ನ ವಶಕ್ಕೆ ನೀಡಿರುತ್ತಾರೆ. ನಂತರ ಸದರಿ ನಿಕ್ಕರ್ ನ್ನು ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ತನಿಖಾಧಿಕಾರಿಯಾದ ತಿಪಟೂರು ಡಿ ವೈ ಎಸ್ ಪಿ ರವರ ಮುಂದೆ ಸದರಿ ನಿಕ್ಕರ್ ನ್ನು ಹಾಜರುಪಡಿಸಿರುತ್ತೇನೆ. ಆಗ ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮ ನಿಕ್ಕರ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಅಮಾನತ್ತುಪಂಚನಾಮೆಯನ್ನು ರಾತ್ರಿ 8 ಗಂಟೆಯಿಂದ 9 ಗಂಟೆಯವ ರಿಗೆ ಮಾಡಿದ್ದು , ಸದರಿ ಪಂಚನಾಮೆಗೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ಅಮಾನತ್ತು ಪಂಚನಾಮೆಯ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು, ಬರ್ಮೋಡ ನಿಕ್ಕರ್ ಅಮಾನತ್ತು ಪಂಚನಾಮೆಯನ್ನು ನಿಪಿ-11 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿದ ಬರ್ಮೋಡ ನಿಕ್ಕರ್ ನ್ನು ನೋಡಿದರೆ ಗುರುತಿಸುತ್ತೇನೆ .

7) ಒಂದು ಸೀಲ್ ಆಗಿರುವ ವಸ್ತುವನ್ನು ತೆರೆದು ನೋಡಲು ಅಭಿಯೋಜಕರು ಅನುಮತಿ ಕೋರಿದ್ದು , ಅನುಮತಿ ನೀಡಿದ್ದು , ಸದರಿ ಸೀಲ್ ಆಗಿರುವ ವಸ್ತುವನ್ನು ತೆರೆದು ನೋಡಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಬರ್ಮೋಡ ನಿಕ್ಕರ್ ನ್ನು ಮು ಮಾ-12 ಎಂದು ಗುರುತಿಸಲಾಯಿತು.

8) ಸದರಿ ಘಟನೆಯ ದಿನ ಪಿ ಎಸ್ ಐ ನವೀನ್ ಕುಮಾರ್ ರವರು ನಮ್ಮ ಆತ್ಮರಕ್ಷಣೆಗಾಗಿ ಗುಂಡು ಹಾರಿಸಿರುತ್ತಾರೆ. ತನಿಖಾಧಿಕಾರಿಗಳು ಘಟನೆ ಕುರಿತು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಡ್ರ್ಯಾಗರ್ ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-5 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರು ಇರುವ ಆರೋಪಿ ವಿಕ್ಕಿ ಅಲಿಯಾಸ್ ವಿಕಾಸ್ ನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ಘಟನೆ ದಿನ ಆರೋಪಿತನು ನಮ್ಮ ಮೇಲೆ ಡ್ರ್ಯಾಗರ್ ನ್ನು ಬಿಸಿ ಕೊಲೆ ಮಾಡಿ ಪರಾರಿಯಾಗಲು ಮಾಡಿರುತ್ತಾರೆ. ಆರೋಪಿತನನ್ನು ಹಿಡಿಯಲು ಹೋದಾಗ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ .

<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎಲ್ ಆರ್ ಆರ್ ವಕೀಲರಿಂದಃ</u>

ಆರೋಪಿ ಪರ ವಕೀಲರು ಕಲಂ.311(2) ಸಿ ಆರ್ ಪಿ ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.
(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು**